ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	305
ಸದಸ್ಯರ ಹೆಸರು	:	ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	09.12.2020
ಉತ್ತರಿಸುವ ಸಚಿವರು	:	ಮಾನ್ಯ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಮತ್ತು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.

ಕ್ರ. ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸಣ್ಣ ಬಂದರು, ಒಳನಾಡು ಸಾರಿಗೆ ಮತ್ತು ಕಡಲ ತೀರಗಳ ಅಭಿವೃದ್ಧಿ ಬೆಳವಣಿಗೆಗೆ The Karnataka Maritime Board ನ್ನು ಸ್ಥಾಪಿಸಲಾಗಿದೆಯೇ; ಹಾಗೂ ಈ ಬೋರ್ಡ್‌ಗೆ ಪದಾಧಿಕಾರಿಗಳನ್ನು ನೇಮಿಸಲಾಗಿದೆಯೇ ; ನೇಮಿಸಿದ್ದಲ್ಲಿ (ವಿವರ ನೀಡುವುದು)	ಕರ್ನಾಟಕ ರಾಜ್ಯದಲ್ಲಿ ಬಂದರುಗಳು, ಒಳನಾಡು ಜಲಸಾರಿಗೆ ಮತ್ತು ಕರಾವಳಿ ಪ್ರದೇಶಗಳ ತ್ವರಿತ ಅಭಿವೃದ್ಧಿಗಾಗಿ ಮತ್ತು ನಿರ್ವಹಣೆಗಾಗಿ ಕರ್ನಾಟಕ ಜಲಸಾರಿಗೆ ಮಂಡಳಿ (The Karnataka Maritime Board) ಯನ್ನು ಕರ್ನಾಟಕ ಜಲಸಾರಿಗೆ ಮಂಡಳಿ ಅಧಿನಿಯಮ, 2015 (2017 ರ ಕರ್ನಾಟಕ ಅಧಿನಿಯಮ ಸಂಖ್ಯೆ 41) ರಂತೆ ಸ್ಥಾಪಿಸಲಾಗಿದ್ದು, ಸದರಿ ಅಧಿನಿಯಮವು ದಿನಾಂಕ : 19.03.2018 ರಿಂದ ಜಾರಿಗೆ ತರಲಾಗಿದೆ. ಸರ್ಕಾರದ ಅಧಿಸೂಚನೆ ಸಂ. ಲೋಇ 13 ಪಿಎಸ್‌ಪಿ 2019 ದಿನಾಂಕ: 09.09.2019 ಮತ್ತು 13.11.2019 ರಲ್ಲಿ ತಿದ್ದುಪಡಿ ಮಾಡಿ, ಮಂಡಳಿಗೆ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಸರ್ಕಾರದ ಅಧಿಸೂಚನೆಯ ಹಾಗೂ ತಿದ್ದುಪಡಿಯ ಪ್ರತಿಯನ್ನು ಅನುಬಂಧ-1 ಮತ್ತು ಅನುಬಂಧ-2 ನೀಡಿದೆ.
2	ರಾಜ್ಯದಲ್ಲಿರುವ ಒಟ್ಟು ಬೃಹತ್ ಮತ್ತು ಸಣ್ಣ ಬಂದರುಗಳೆಷ್ಟು; ಈ ಬಂದರುಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಯಾವುದಾದರೂ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿದೆಯೇ; ರೂಪಿಸಿದ್ದಲ್ಲಿ, ಈ ಯೋಜನೆಯನ್ನು ಯಾವ ಸಂಸ್ಥೆಯಿಂದ ನಿರ್ವಹಿಸಲಾಗಿದೆ. ಈ ಯೋಜನಾ ವರದಿಯ ಸಂಕ್ಷಿಪ್ತ ವಿವರ ನೀಡುವುದು;	ನವಮಂಗಳೂರು ಬಂದರು ರಾಜ್ಯದ ಏಕೈಕ ಬೃಹತ್ ಬಂದರಾಗಿದ್ದು, ಕೇಂದ್ರ ಸರ್ಕಾರದ ಆಡಳಿತಕ್ಕೆ ಒಳಪಟ್ಟಿದೆ. ರಾಜ್ಯ ಸರ್ಕಾರದ ನಿಯಂತ್ರಣದಲ್ಲಿ 12 ಕಿರು ಬಂದರುಗಳಿದ್ದು, ಅವುಗಳು 1) ಕಾರವಾರ 2)ಬೇಲೇಕೇರಿ 3)ತದಡಿ 4)ಪಾವಿನಕುರ್ವೆ 5)ಹೊನ್ನಾವರ 6)ಮಂಕಿ 7)ಭಟ್ಕಳ 8)ಕುಂದಾಪುರ 9)ಹಂಗಾರಕಟ್ಟಾ 10)ಮಲ್ಪೆ 11)ಪಡುಬಿದ್ರಿ 12)ಹಳೇ ಮಂಗಳೂರು ಬಂದರು.

...2/-

ಕ್ರ. ಸಂ ಖ್ಯೆ	ಪ್ರಶ್ನೆ	ಉತ್ತರ
		ರಾಜ್ಯದ ಕರಾವಳಿಯಲ್ಲಿನ ಕಿರು ಬಂದರುಗಳ ಅಭಿವೃದ್ಧಿ, ಕರಾವಳಿ ಸಂರಕ್ಷಣೆ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ : ಈ ವಿಷಯದ ಕುರಿತು ಸಮಗ್ರವಾಗಿ Karnataka Maritime Perspective Plan ತಯಾರಿಸಲು ಅಂತರಾಷ್ಟ್ರೀಯ ಮಟ್ಟದ ಸಂಸ್ಥೆಯಾದ PWC (Pricewaterhouse Coopers) ಸಂಸ್ಥೆಯನ್ನು ಸಮಾಲೋಚಕರನ್ನಾಗಿ ನೇಮಿಸಿಕೊಳ್ಳಲು ಕೆ.ಟಿ.ಪಿ.ಪಿ. ಅಧಿನಿಯಮ 1999ರ ಕಲಂ 4(ಜಿ) ರಡಿ ವಿನಾಯಿತಿ ನೀಡಲಾಗಿದ್ದು, ಇದರಂತೆ PWC ಸಂಸ್ಥೆಯವರು ದಿನಾಂಕ:24.07.2020 ರಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ಅದರಂತೆ, M/s PWC ಸಂಸ್ಥೆಯವರ ಯೋಜನಾವರದಿಯ ವಿವರ ಹಾಗೂ ಸದರಿಯವರು ಮಾಡಿರುವ ಶಿಫಾರಸ್ಸುಗಳನ್ನು ಅನುಬಂಧ-3 ರಲ್ಲಿ ನೀಡಿದೆ.
3	ಕೇಂದ್ರ ಸರ್ಕಾರದ 'ಸಾಗರಮಾಲಾ ಯೋಜನೆ' ಯಡಿ ಯಾವ ಯಾವ ಬಂದರುಗಳನ್ನು ಮತ್ತು ಕಡಲ ತೀರಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ? (ವಿವರ ನೀಡುವುದು)	ಕೇಂದ್ರ ಸರ್ಕಾರದ 'ಸಾಗರಮಾಲಾ ಯೋಜನೆ' ಯಡಿ ಕಾರವಾರ ಮತ್ತು ಹಳೇ ಮಂಗಳೂರು ಬಂದರನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಸದರಿ ಯೋಜನೆಯಡಿ ಮಂಜೂರಾಗಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ-4 ರಲ್ಲಿ ನೀಡಿದೆ.

ಕಡತ ಸಂಖ್ಯೆ: IDD 110 PSP 2020 (E-389447)

(ಕೋಟ ಶ್ರೀನಿವಾಸ ಪೂಜಾರಿ)

ಅನುಬಂಧ - 1

(78)

GOVERNMENT OF KARNATAKA

No.PWD 13 PSP 2019

Karnataka Government Secretariate,
Vikasa Soudha,
Bangalore, dated:09th September 2019.

25 SEP 2019

NOTIFICATION

In the Notification. No.SAMVYASHAE 54 SHASANA 2015 dated: 23-08-2017, Karnataka Maritime Board Act, 2015 has framed with the concurrence of the President for the development and Management of Ports, Inland Water Ways and the Coastal region in the State of Karnataka by establishing the Karnataka Maritime Board and to provide for matters connected therewith and incidental thereto.

In the Notification No.PWD 111 PSP 2017 dated: 19-03-2018, in exercise of the powers conferred by sub-section (2) of section 1 of the Karnataka Maritime Board Act, 2015 (Karnataka Act 41 of 2017) the Government of Karnataka hereby appoints with 19th day of March 2018, to be the date on which the said Act will come into force.

In exercise of the powers conferred by section 3 of chapter – II of the Karnataka Maritime Board Act, 2015 as soon as may be after the commencement of this Act, the Government may, by notification, in the official Gazette, establish a Board to be called the Karnataka Maritime Board. Accordingly, a board has been constituted for the Karnataka Maritime Board consisting of the following members:

1)	The Additional Chief Secretary to Government and Development Commissioner.	Chairman
2)	The Principal Secretary to Government, Public Works. Ports and Inland Water Transport Department.	Vice Chairman
3)	The Principal Secretary to Government, Finance Department.	Ex-Officio Members
4)	The Principal Secretary to Government. Home Department.	Ex-Officio Members

5)	The Secretary to Government, Public Works, Ports and Inland Water Transport Department.	Ex-Officio Members
6)	The Joint Secretary, Government of India, Ministry of Shipping.	Ex-Officio Members
7)	The Inspector General of Police, Internal Security Wing, incharge of costal security	Ex-Officio Members
8)	The Director of Ports and Inland Water Transport Department.	Ex-Officio Members
9)	The Director of Fisheries, Karnataka.	Ex-Officio Members
10)	The Naval Officer in charge, INS Kadamba-Karwar, Uttara Kannada District.	Ex-Officio Members
11)	The Commander, Coast Guard District, Head Quarters, No.3, New Mangalore	Ex-Officio Members
12)	Commissioner of Customs, Karnataka.	Ex-Officio Members
13)	Project Director, SCPMIP, Mangalore as the Member (Technical) of the Board	Ex-Officio Members
14)	The Chief Executive Officer of the Board.	Ex-Officio Members Secretary

The headquarters of the board shall be at Karwar and the corporate office of the board shall be at Mangalore.

By Order and in the name of the
Governor of Karnataka,

07/05/14

(SHIVASHARANAPPA PATIL)
Under Secretary to Government,
Public Works, Ports and Inland Water
Transport Department (Ports)

To:

1. The Compiler, Karnataka Gazette, Government Press, Kengeri, Bangalore-560 059, with request to publish the Government Notification in the Gazette and to supply 200 copies of the Printed Notification to the Government and 100 copies to the Director, Ports and Inland Water Transport Department, Karwar.
2. Accountant General (A and I), Karnataka, Bangalore.
3. The Additional Chief Secretary to Government, Vidhana Soudha, Bangalore.
4. The Additional Chief Secretary and Development Commissioner, Vidhana Soudha, Bangalore.
5. The Principal Secretary to Government, Finance Department, Vidhana Soudha, Bangalore.
6. The Principal Secretary to Government, Home Department, Vidhana Soudha, Bangalore.

7. The Joint Secretary, Government of India, Ministry of Shipping, New Delhi.
8. The Inspector General of Police, Internal Security Wing, incharge of costal security.
9. The Chief Executive Officer, Karnataka Maritime Board, Karwar.
10. The Director, Ports and Inland Water Transport Department, Karwar.
11. The Project Director, P.M.U. Sustainable Coastal Protection and Management Improvement Plan, Mangalore.
12. The Director, Fisheries Department, Bangalore.
13. The Naval Officer in charge, INS Kadamba Karwar Uttara Kannada District.
14. The Commander, Coast Guard District, Head Quarters, No.3, New Mangalore
15. The Commissioner of Customs, Karnataka.

Copy to:

1. Private Secretary to Additional Chief Secretary to Hon'ble Chief Minister, Vidhana Soudha.
2. Private Secretary to Hon'ble Minister for Muzrai, Fisheries, Ports and Inland Water Transport, Vidhana Soudha.
3. P.S. to Additional Chief Secretary to Government, Public Works, Ports and Inland Water Transport Department.
4. P.S. to Secretary to Government, Public Works, Ports and Inland Water Transport Department.
5. P.A. to Additional Secretary to Government, Public Works, Ports and Inland Water Transport Department.
6. P.A. to Deputy Secretary to Government (Services), Public Works, Ports and Inland Water Transport Department.
7. P.A. to Deputy Secretary to Government (C&B), Public Works, Ports and Inland Water Transport Department.
8. SGF.

ಅನುಬಂಧ - 2

(೬೦)

ಕರ್ನಾಟಕ ಸರ್ಕಾರ

ಸಂಖ್ಯೆ: ಲೋಇ 13 ಪಿಎಸ್‌ಪಿ 2019

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:13.11.2019

ತಿದ್ದುಪಡಿ

ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ 13 ಪಿಎಸ್‌ಪಿ 2019 ದಿನಾಂಕ:09.09.2019 ರಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಇವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದು, ಅವರ ಬದಲಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರನ್ನು ಅಧ್ಯಕ್ಷರನ್ನಾಗಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

13/11/19

(ಎಸ್.ಯೋಗಾನಂದ)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ (ಬಂದರುಗಳು)

ಗೆ:

1. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಕೆಂಗೇರಿ, ಬೆಂಗಳೂರು - 560059- ಅಧಿಸೂಚನೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿ 200 ಪ್ರತಿಗಳನ್ನು ಒದಗಿಸುವಂತೆ ಕೋರಿದೆ.
2. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ತನಿಖೆ), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ,
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ,
8. ಜಂಟಿ ಕಾರ್ಯದರ್ಶಿಗಳು, ಭಾರತ ಸರ್ಕಾರ, ನೌಕಾ ಮಂತ್ರಾಲಯ,ನವದೆಹಲಿ
9. ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್, ಕರಾವಳಿ ಭದ್ರತೆಯ ಪ್ರಭಾರದ ಅಂತರಿಕ ಭದ್ರತಾ ಶಾಖೆ.
10. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ.
11. ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕಾರವಾರ.
12. ಯೋಜನಾ ನಿರ್ದೇಶಕರು, ಯೋಜನಾ ನಿರ್ವಹಣಾ ಘಟಕ, ಸುಸ್ಥಿರ ಕರಾವಳಿ ತೀರ ಸಂರಕ್ಷಣೆ ಹಾಗೂ ಅಭಿವೃದ್ಧಿ ಯೋಜನೆ, ಮಂಗಳೂರು.
13. ನಿರ್ದೇಶಕರು, ಮೀನುಗಾರಿಕಾ ಇಲಾಖೆ, ಬೆಂಗಳೂರು.
14. ಪ್ರಭಾರ ನೌಕಾ ಅಧಿಕಾರಿ, ಐಎನ್‌ಎಸ್ ಕದಂಬ, ಕಾರವಾರ, ಉತ್ತರ ಕನ್ನಡ ಜಿಲ್ಲೆ.
15. ಕಮಾಂಡರ್, ಕರಾವಳಿ ರಕ್ಷಣಾ ಜಿಲ್ಲೆ, ಕೇಂದ್ರಸ್ಥಾನ, ನಂ.3, ಹೊಸ ಮಂಗಳೂರು,
16. ಸೀಮಾ ಸುಂಕ ಕಮಿಷನ್, ಕರ್ನಾಟಕ

ಪ್ರತಿ:

1. ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.

. 2

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
3. ಸರ್ಕಾರದ ಕಾರ್ಯದರ್ಶಿಯವರ, ಆಪ್ತ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
4. ಸರ್ಕಾರದ ಅಪರ ಕಾರ್ಯದರ್ಶಿಯವರ, ಆಪ್ತ ಸಹಾಯಕರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
5. ಸರ್ಕಾರದ ಉಪ ಕಾರ್ಯದರ್ಶಿ(ಸೇವೆಗಳು)ಯವರ ಆಪ್ತ ಸಹಾಯಕರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
6. ಸರ್ಕಾರದ ಉಪ ಕಾರ್ಯದರ್ಶಿ(ಸಂ & ಕ) ಯವರ ಆಪ್ತ ಸಹಾಯಕರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ-3

Karnataka Maritime Perspective Plan ಬಗ್ಗೆ M/s. Price Waterhouse Coopers ಸಂಸ್ಥೆಯವರು ಮಾಡಿದ ಶಿಫಾರಸ್ಸುಗಳು

- ಪ್ರಸ್ತುತ, ರಾಜ್ಯದ ಕಿರು ಬಂದರುಗಳಿಗೆ ಅಸ್ತಿತ್ವದಲ್ಲಿರುವ ಸಂಪರ್ಕದೊಂದಿಗೆ, 2035ನೇ ಸಾಲಿನಲ್ಲಿ ವಾರ್ಷಿಕವಾಗಿ ಸುಮಾರು 10 ಮೆಟ್ರಿಕ್ ಟನ್ ಸರಕು ಸಾಮಗ್ರಿಗಳನ್ನು (ಉಷ್ಣ ಕಲ್ಲಿದ್ದಲು, ಪೆಟ್ ಕೋಕ್, ಕಂಟೇನರ್, ಸಾಮಾನ್ಯ ಸರಕುಗಳು ಹಾಗೂ ದ್ರವ ರೂಪದ ಸರಕುಗಳು) ನಿರ್ವಹಿಸಬಹುದಾಗಿದೆ.

- ಕಾರವಾರ ಬಂದರಿನಲ್ಲಿ ಒಂದು ಎಲ್ಲಾ ಸರಕುಗಳನ್ನು ನಿರ್ವಹಿಸುವ ವಾರ್ಫ್ ನಿರ್ಮಿಸುವುದು. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಿಂದ ಬೇಲೇಕೇರಿ ಮಧ್ಯದಲ್ಲಿ ಒಂದು ಬಂದರನ್ನು ನಿರ್ಮಿಸುವುದು.

- ಬಂದರು ಆಧಾರಿತ ಶೇಖರಣಾ ಮತ್ತು ವಿತರಣಾ ಕೇಂದ್ರಗಳ ಮೂಲಕ ಕರಾವಳಿ ಸರಕುಗಳನ್ನು (ಸಿಮೆಂಟ್, ಆಹಾರ ಧಾನ್ಯಗಳು ಮತ್ತು ರಸಗೊಬ್ಬರ) ನಿರ್ವಹಿಸಿದಲ್ಲಿ, 2035ನೇ ಸಾಲಿನಲ್ಲಿ ಅಧಿಕವಾಗಿ 2.8 ಮೆಟ್ರಿಕ್ ಟನ್ ವಾರ್ಷಿಕವಾಗಿ ನಿರ್ವಹಿಸಬಹುದಾಗಿದೆ. ಆದರೆ ಈ ಕಾರ್ಯಾಚರಣೆಗೆ ಸುಮಾರು 80 ಎಕರೆಯಷ್ಟು ಜಾಗವು ಸರಕು ಸಾಮಗ್ರಿಗಳ ಸಂಗ್ರಹಣೆಗೆ ಮತ್ತು ನಿರ್ವಹಣೆಗೆ ಬೇಕಾಗುತ್ತದೆ.

- ಕಬ್ಬಿಣದ ಅದಿರನ್ನು ಉತ್ತರ ಕರ್ನಾಟಕ ಭಾಗದ ಸ್ಟೀಲ್ ಉತ್ಪನ ಕಂಪನಿಗಳಿಗೆ ದ್ರವ ರೂಪದಲ್ಲಿ ಪೈಪ್‌ಲೈನ್ ಮೂಲಕ ಸಾಗಿಸಿದಲ್ಲಿ, ಕರ್ನಾಟಕದ ಕಿರು ಬಂದರುಗಳಲ್ಲಿ ಹೆಚ್ಚುವರಿಯಾಗಿ ವಾರ್ಷಿಕ ಸುಮಾರು 8 ಮೆಟ್ರಿಕ್ ಟನ್ ಸರಕನ್ನು ನಿರ್ವಹಿಸಬಹುದಾಗಿದೆ.

- ರಾಜ್ಯದ ಕರಾವಳಿ ತೀರದಲ್ಲಿ ಪ್ರವಾಸೋದ್ಯಮವನ್ನು ಗುರಿಯಾಗಿಸಿಕೊಂಡು ಐಷಾರಾಮಿ ವಿಹಾರ ನೌಕೆಗಳು, ವಿಹಾರ ನೌಕೆಗಳು, ಮರಿನಾಗಳು, ಹೆಲಿ-ಪ್ರವಾಸೋದ್ಯಮ ಮತ್ತು ಕ್ಯಾಬಾನಾಗಳನ್ನು ಅಭಿವೃದ್ಧಿಪಡಿಸಬಹುದಾಗಿದೆ. ಕರಾವಳಿಯಾದ್ಯಂತ ಜಲ ಕ್ರೀಡಾ ಚಟುವಟಿಕೆಗಳ ಅಗತ್ಯತೆಗಳನ್ನು ಪೂರೈಸಲು ಕಾರವಾರದಲ್ಲಿ ಜಲಕ್ರೀಡೆ ಸಂಸ್ಥೆಯನ್ನು ಸ್ಥಾಪಿಸಿ, ಅಭಿವೃದ್ಧಿಪಡಿಸಬಹುದಾಗಿದೆ. ಕಾರವಾರದಲ್ಲಿ ಪ್ರಸ್ತಾಪಿಸಿರುವ ವಿಮಾನ ನಿಲ್ದಾಣವು ಈ ಪ್ರದೇಶದ ಪ್ರವಾಸೋದ್ಯಮಕ್ಕೆ ಪ್ರಮುಖ ಉತ್ತೇಜನವನ್ನು ನೀಡುತ್ತದೆ ಮತ್ತು ಕಾರವಾರ, ಗೋಕರ್ಣ ಹಾಗೂ ತದಡಿಯಲ್ಲಿ ಪ್ರವಾಸೋದ್ಯಮ ವಲಯಗಳ ಅಭಿವೃದ್ಧಿಗೆ ವಿಪುಲ ಅವಕಾಶಗಳನ್ನು ಸೃಷ್ಟಿಸುತ್ತದೆ. ಆದ್ದರಿಂದ ಈ ನಿಟ್ಟಿನಲ್ಲಿ ಕಡಲ ಆಧಾರಿತ ಪ್ರವಾಸೋದ್ಯಮ ಯೋಜನೆಗಳ ಅನುಷ್ಠಾನವನ್ನು ಬಂದರು ಇಲಾಖೆಯು ನೇರವಾಗಿ ಕೈಗೆತ್ತಿಕೊಳ್ಳಬಹುದು ಮತ್ತು/ ಅಥವಾ ಇತರೆ ಇಲಾಖೆಗಳ ಸಹಯೋಗದೊಂದಿಗೆ ಕೈಗೊಳ್ಳುವ ಅಗತ್ಯವಿರುತ್ತದೆ.

- ಡೀಪ್ ಸೀ ಮೀನುಗಾರಿಕೆಯನ್ನು ಉತ್ತೇಜಿಸುವುದು ಹಾಗೂ ಉನ್ನತ ಮಟ್ಟದ ಮೀನು ಸಂಸ್ಕರಣ ಘಟಕಗಳನ್ನು ನಿರ್ಮಿಸಿ ಮೀನು ಉತ್ಪನಗಳ ರಫ್ತಿಗೆ ಅನುಕೂಲ ಮಾಡಿಕೊಡುವುದು.

ರಾಜ್ಯದ ಕಿರು ಬಂದರುಗಳ ಅಭಿವೃದ್ಧಿಯನ್ನು ಅಲ್ಪ, ಮಧ್ಯಮ ಮತ್ತು ದೀರ್ಘಾವಧಿಯ ಕ್ರಿಯಾ ಯೋಜನೆಯಡಿ ಕೈಗೊಳ್ಳಲು ಮಾರ್ಗನಕ್ಷೆ,

ಅಲ್ಪಾವಧಿ ಯೋಜನೆಗಳು (ಮುಂದಿನ 1 ವರ್ಷದಲ್ಲಿ ತೆಗೆದುಕೊಳ್ಳಲಾಗುವುದು)

- ಬಂದರು ನೀತಿ ಪರಿಷ್ಕರಣೆ ಮತ್ತು ರಿಯಾಯಿತಿ ಒಪ್ಪಂದದ ಕರಡು ತಯಾರಿಕೆ.
- ಗುರುತಿಸಲಾದ ಬಂದರುಗಳ ಅಭಿವೃದ್ಧಿಗೆ ಪ್ರಕ್ರಿಯೆ ಕೈಗೊಳ್ಳುವುದು.

- ಕರಾವಳಿ ಸರಕುಗಳಿಗಾಗಿ ಬಂದರು ಆಧಾರಿತ ಶೇಖರಣಾ ಮತ್ತು ವಿತರಣಾ ಕೇಂದ್ರಗಳಿಗೆ ಅವಕಾಶ ಕಲ್ಪಿಸುವಿಕೆ
- ಕೈಗಾರಿಕಾ ಇಲಾಖೆಯ ಸಹಯೋಗದಲ್ಲಿ ಬಂದರುಗಳ ಬಳಿ ಕೈಗಾರಿಕಾ ವಲಯ / ಕ್ಲಸ್ಟರ್ ಯೋಜನೆಗಾಗಿ ವಲಯಗಳನ್ನು ಗುರುತಿಸುವುದು.
- ಪ್ರವಾಸೋದ್ಯಮ ಇಲಾಖೆಯೊಂದಿಗೆ ಸಮನ್ವಯಕ್ಕಾಗಿ ಸಾಂಸ್ಥಿಕ ರಚನೆ ಕೈಗೊಳ್ಳುವುದು.

ಮಧ್ಯಮ ಅವಧಿ ಯೋಜನೆಗಳು

- ಹೆಚ್ಚುವರಿಯಾಗಿ ಸರಕು ಸಾಮಗ್ರಿಗಳನ್ನು ನಿರ್ವಹಿಸಲು ಪೂರಕವಾಗಿ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಕಬ್ಬಿಣದ ಅದಿರನ್ನು ದ್ರವ ರೂಪದಲ್ಲಿ ಪೈಪ್‌ಲೈನ್ ಮುಖಾಂತರ ಸಾಗಾಣಿಕೆ ಮಾಡಲು ಅತ್ಯವಶ್ಯಕ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದು.
- ಕಡಲ ಪ್ರವಾಸೋದ್ಯಮ ಯೋಜನೆಗಳಿಗೆ ವಿಸ್ತೃತ ಯೋಜನಾ ವರದಿ ತಯಾರಿಕೆ ಹಾಗೂ ಕಾರ್ಯಸಾಧ್ಯವಾಗುವ ಯೋಜನೆಗಳ ಅನುಷ್ಠಾನ ಪ್ರಕ್ರಿಯೆಗಳನ್ನು ಜರುಗಿಸುವುದು.

ದೀರ್ಘಕಾಲದ ಯೋಜನೆಗಳು

- ರಾಜ್ಯದ ಕಿರು ಬಂದರುಗಳಿಗೆ ರೈಲು ಸಂಪರ್ಕವನ್ನು ಕಲ್ಪಿಸಲು ರಾಜ್ಯ/ ಕೇಂದ್ರ ಸರ್ಕಾರದ ಸಹಾಯದೊಂದಿಗೆ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸುವುದು.

ಅನುಬಂಧ-4

ಸಾಗರಮಾಲಾ ಕೋಸ್ಟಲ್ ಬರ್ತ್ ಯೋಜನೆಯಡಿ ಮಂಜೂರಾದ ಕಾಮಗಾರಿಗಳ ವಿವರ

ಕ್ರ. ಸಂ.	ವಿವರ	ಮಂಜೂರಾದ ಕಾಮಗಾರಿಯ ಹೆಸರು			
1.	ಕಾಮಗಾರಿಯ ಹೆಸರು	ಕಾರವಾರ ಬಂದರಿನಲ್ಲಿ 250 ಮೀ. ಉದ್ದದ ಕೋಸ್ಟಲ್ ಬರ್ತ್ ನಿರ್ಮಾಣ	ಕಾರವಾರ ಬಂದರಿನಲ್ಲಿ ಉತ್ತರ ದಿಕ್ಕಿಗೆ ಹೊಸದಾಗಿ 1160 ಮೀ. ಉದ್ದದ ಬ್ರೇಕ್ ವಾಟರ್ ನಿರ್ಮಾಣ ಹಾಗೂ ಪ್ರಸ್ತುತ ದಕ್ಷಿಣ ದಿಕ್ಕಿಗೆ ಇರುವ 250 ಮೀ. ಉದ್ದದ ಬ್ರೇಕ್ ವಾಟರ್‌ನ್ನು 145 ಮೀ. ಉದ್ದಕ್ಕೆ ವಿಸ್ತರಿಸುವ ಕಾಮಗಾರಿ	ಹಳೇ ಮಂಗಳೂರು ಬಂದರಿನಲ್ಲಿ 350 ಮೀ. ಉದ್ದದ ಕೋಸ್ಟಲ್ ಬರ್ತ್ ನಿರ್ಮಾಣ	ಹಳೇ ಮಂಗಳೂರು ಬಂದರಿನಲ್ಲಿ ಬೇಂಗ್ರೆ ಬದಿಗೆ ಹೂಳೆತ್ತುವ ಕಾಮಗಾರಿ
2.	ಕೇಂದ್ರ ಸರ್ಕಾರದ ಮಂಜೂರಾತಿ ಸಂಖ್ಯೆ	C2- 25021 /11/2017 –SM- PART-II dated : 15-09-2017	C2- 25021 /11/2017 –SM (PART-III) dated : 27-09-2017	C2-25021/11/2017-SM Dt. 14.09.2017.	C2-25021/11/2017-SM-PART I: Dt. 14.09.2017.
3.	ಲೆಕ್ಕ ಶೀರ್ಷಿಕೆ	5051-02-211-0-01-059	5051-02-211-0-01-059	5051-02-211-0-01-059	5051-02-211-0-01-059
4.	ಮಂಜೂರಾದ ಅಂದಾಜು ಮೊತ್ತ	ರೂ. 61.00 ಕೋಟಿ	ರೂ. 215.00 ಕೋಟಿ (ಸಾಗರಮಾಲಾ ಯೋಜನೆಯಡಿ ಉತ್ತರ ಬದಿಯ 880 ಮೀ. ಉದ್ದದ ಬ್ರೇಕ್ ವಾಟರ್ ನಿರ್ಮಾಣ ಕಾಮಗಾರಿಗೆ ರಾಜ್ಯ ಸರ್ಕಾರದಿಂದ ರೂ.125.00 ಕೋಟಿ ಮೊತ್ತಕ್ಕೆ ಮಂಜೂರಾತಿ ದೊರೆತಿರುತ್ತದೆ)	ರೂ. 65.00 ಕೋಟಿ	ರೂ. 29.00 ಕೋಟಿ
5.	ಕೇಂದ್ರ ಸರ್ಕಾರದ ಪಾಲು	ರೂ.25.00 ಕೋಟಿ	ರೂ.50.00 ಕೋಟಿ	ರೂ.25.00 ಕೋಟಿ	ರೂ.14.50 ಕೋಟಿ
6.	ರಾಜ್ಯ ಸರ್ಕಾರದ ಪಾಲು	ರೂ.36.00 ಕೋಟಿ	ರೂ.165.00 ಕೋಟಿ	ರೂ.40.00 ಕೋಟಿ	ರೂ.14.50 ಕೋಟಿ
7.	ಕೇಂದ್ರ ಸರ್ಕಾರದಿಂದ ಈಗಾಗಲೇ ಬಿಡುಗಡೆಯಾದ ಅನುದಾನ	ರೂ.12.50 ಕೋಟಿ	ರೂ.25.00 ಕೋಟಿ	ರೂ.12.50 ಕೋಟಿ	ರೂ.7.25 ಕೋಟಿ
8.	ರಾಜ್ಯ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಸಂಖ್ಯೆ	PWD 125 PSP 2017 dated : 21-03-2018	PWD 127 PSP 2017 dated: 21-03-2018.	PWD 123 PSP 2017, Dt. 21.03.2018.	PWD 124 PSP 2017, Dt. 21.03.2018.
9.	ಕಾಮಗಾರಿಯ ಅನುಷ್ಠಾನಾಧಿಕಾರಿ	ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ವಿಭಾಗ, ಕಾರವಾರ	ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ವಿಭಾಗ, ಕಾರವಾರ	ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ	ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ಮತ್ತು ಮೀನುಗಾರಿಕಾ

					ವಿಭಾಗ, ಉಡುಪಿ
10.	ತಾಂತ್ರಿಕ ಮಂಜೂರಾತಿ ಸಂಖ್ಯೆ	CE, PWD (North), Dharwad CER No.125/2018-19/ January 2019.	CE, PWD (North), Dharwad CER No.144/2017-18/ May 2017.	CE, PWD (North), Dharwad CER No.264/2019-20 dated :14.10.2019	CE, PWD (North), Dharwad CER No.54/2018-19 dated :19.09.2018
11.	ಟೆಂಡರ್ ಕರೆದ ದಿನಾಂಕ	04.06.2019	08.06.2017	17.10.2019	17.10.2019
12.	ಟೆಂಡರ್ ಗಿಟ್ಟು ಮೊತ್ತ	ರೂ. 55.99 ಕೋಟಿ	ರೂ. 109.6486 ಕೋಟಿ	ರೂ. 54.04 ಕೋಟಿ	ರೂ. 29.00 ಕೋಟಿ
13.	ಟೆಂಡರ್ ಸ್ವೀಕೃತಿ ದಿನಾಂಕ	15.02.2020	21.03.2018	-	-
14.	ಗುತ್ತಿಗೆದಾರರ ಹೆಸರು	Shri K. Murugeshan, (Emjay Constructions), Chennai	M/s DVP Infra Project Pvt. Ltd., Mumbai	Emjay Constructions, Chennai	-
15.	ಪ್ರಸ್ತುತ ಹಂತ	ದಿನಾಂಕ : 15.02.2020 ರಂದು ಆರ್ಥಿಕ ಬಿಡ್ ಗೆ ಸರ್ಕಾರದಿಂದ ಅನುಮೋದನೆ ದೊರಕಿರುತ್ತದೆ. ಆದರಂತೆ ದಿನಾಂಕ : 21.03.2020 ರಂದು ಗುತ್ತಿಗೆದಾರರಿಗೆ ಒಪ್ಪಿಗೆ ಪತ್ರವನ್ನು ನೀಡಲಾಗಿದೆ. ಕಾರವಾರ ಬಂದರಿನ 2ನೇ ಹಂತದ ಕಾಮಗಾರಿಯ ಬಗ್ಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾವೆ (ಸಂ. 1332/2020) ಹೂಡಿರುವುದರಿಂದ, ಕಾಮಗಾರಿ ಆದೇಶ ನೀಡುವ ಬಗ್ಗೆ ಮಾನ್ಯ ನ್ಯಾಯಾಲಯದ ನಿರ್ದೇಶದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.	ಗುತ್ತಿಗೆದಾರರು ನವೆಂಬರ್, 2019 ರಂದು ಕಾಮಗಾರಿಯನ್ನು ಪ್ರಾರಂಭಿಸಿದ್ದು, ಈ ಬಗ್ಗೆ ಬೈತ್ ಖೋಲ್ ಬಂದರು ನಿರಾಶ್ರಿತರ ಮೀನುಗಾರರ ಸಹಕಾರ ಸಂಘ ನಿಯಮಿತ, ಬೈತ್ ಖೋಲ್ ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾವೆ (W.P. No. 1332/ 2020 (GM-PIL)) ಹೂಡಿರುತ್ತಾರೆ. ಪ್ರಸ್ತುತ ದಿನಾಂಕ : 01.12.2020 ರಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿದ್ದು, ದಿನಾಂಕ : 16.12.2020 ರಂದು ಮುಂದಿನ ವಿಚಾರಣೆಯನ್ನು ನಿಗದಿಪಡಿಸಲಾಗಿದೆ. ಮಾನ್ಯ ನ್ಯಾಯಾಲಯದ ಆದೇಶ ಪ್ರಾಪ್ತವಾದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು.	ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಮ ಬೆಂಗಳೂರು ಇಲ್ಲಿ W.P. No.8600/2020 ರಲ್ಲಿ ದಾವೆ ಹೂಡಲಾಗಿದ್ದು, ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ದಿನಾಂಕ : 09.11.2020 ರಂದು ಸರ್ಕಾರದ ಮಟ್ಟದಲ್ಲಿ ಸಭೆಯನ್ನು ಜರುಗಿಸಿದ್ದು, M/s Shreeshaila Constructions Pvt. Ltd., Hyderabad ಇವರ ಅಪೀಲನ್ನು ವಜಾಗೊಳಿಸಿರುತ್ತದೆ. ಅದರಂತೆ ಕಾರ್ಯನಿರ್ವಾಹಕ ಇಂಜಿನೀಯರ್ ರವರು ಗುತ್ತಿಗೆದಾರರಾದ M/s Emjay Constructions, Chennai ಇವರೊಂದಿಗೆ ದಿನಾಂಕ : 21.11.2020 ರಂದು ಕರಾರನ್ನು ನಿರ್ವಹಿಸಿ, ಕಾಮಗಾರಿ ಆದೇಶವನ್ನು ನೀಡಿರುತ್ತಾರೆ. ಪ್ರಸ್ತುತ M/s Shreeshaila Constructions Pvt. Ltd., Hyderabad ಇವರು ಮತ್ತೊಮ್ಮೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ದಾವೆಯನ್ನು ಹೂಡಿದ್ದು, ದಿನಾಂಕ : 10.12.2020 ರಂದು ವಿಚಾರಣೆಗೆ ಬಾಕಿ ಇರುತ್ತದೆ.	ದಿನಾಂಕ : 12.11.2020 ರ ಸರ್ಕಾರದ ಆದೇಶದಂತೆ 4ನೇ ಬಾರಿ ಟೆಂಡರನ್ನು ಕರೆಯಲಾಗಿದ್ದು, ದಿನಾಂಕ: 15.12.2020 ರಂದು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವನ್ನು ನಿಗದಿಪಡಿಸಲಾಗಿದೆ.